

ಮೇಲೆಲ್ಲಾ ಕೈ ಮಾಡಿದರು. ಹುಡುಕಿ ಬೇಸತ್ತರು. ಮರ್ಯಾದೆಗಿಂತ ಯಾವ್ದೂ ದೊಡ್ಡದಲ್ಲವೆನ್ನಿಸಿ ಪೊಲೀಸಿಗೆ ದೂರು ಕೊಡದೆ ಒಳಗೇ ಕಹಿಯನ್ನು ನುಂಗಿಕೊಂಡರು. ಇದೆಲ್ಲಾ ಆಗಿ ಮೂರು ವರ್ಷಗಳು ಹಳತಾಗಿವೆ. ಗೌಡರೂ ಮಗಳ ಆಸೆ ಬಿಟ್ಟಿದ್ದಾರೆ. ಯಾರಾದರೂ ನೆನಪು ಮಾಡಿದಾಗ ಹಿಂದಿನಂತೆ ಉಗ್ರಾವತಾರ ತಾಳದೆ, 'ಎಲ್ಲಾ ಹಣೆಬರೇವು ಕಣ್ಲಾ. ಅವ್ಳು ಪಡ್ಕಂಬಂದಿದ್ದು ಅದು' ಎಂದು ನಿಟ್ಟುಸಿರು ಬಿಡುತ್ತಾರೆ. ಆಗೀಗ ಅಪ್ಪ ಅಮ್ಮ ಹಳ್ಳಿ ನೆಪ್ಪಾದಾಗ ಮೊದಲಿನಂತೆ ಮೊಣಕಾಲಲ್ಲಿ ತಲೆ ತೂರಿಸಿ ಅಳುವುದನ್ನು ಮರೆತಿರುವ ಜ್ಯೋತಿಯೂ ಈಗ ನಿಟ್ಟುಸಿರಾಗುತ್ತಾಳಷ್ಟೆ. ಜೀವನ ಹೀಗೆ ನಿಸೂರಾಗಿ ಸಾಗಿದರೆ ಜೀವನ ಹೆಂಗಾದೀತು! ಕತ್ತಲಾದ ಮೇಲೆ ಬೆಳಕೂ ಬರಲೇ ಬೇಕಲ್ಲವೆ.

ಒಂದು ಸಂಜೆ ಪಿಕ್ಚರ್‌ಗೆ ಹೋದಾಗ ಥಿಯೇಟರಿನಲ್ಲಿಯೇ ಜ್ಯೋತಿ ಯಶವಂತಂಗೆ ಗೌಡರ ಮಕ್ಕಳ ದರ್ಶನವಾಯಿತು. ಯಶವಂತ ಬೇಡವೆಂದರೂ 'ಅಣ್ಣಾ' ಎಂದವರನ್ನವಳು ಪಿಕ್ಚರ್ ಬಿಟ್ಟ ಮೇಲೆ ಮಾತನಾಡಿಸಿದಳು. ಮನೆಗೆ ಕರೆದಳು. ಅವರು ಹೆಚ್ಚೇನು ಗುರುಗುಟ್ಟದೆ ಗುರಾಯಿಸುತ್ತಲೇ ಮನೆಗೆ ಬಂದರು. 'ಇದೇನಿದು ಜೋಪಡಿಯಂತ ಮನೆ' ಎಂದು ನಗೆಯಾಡಿದರು. ಊಟಕ್ಕೆ ಕರೆದರೂ ಮೇಲೇಳಲಿಲ್ಲ. ಕಾಫಿಗಿಡ್ಲೇನಿ ಎಂದರೂ ಕೇಳದೆ ದಡಬಡಿಸಿ ಮೇಲೆದ್ದರು. ಹೋಗುವಾಗ 'ದುಡ್ಡೇನಾರ ಬೇಕಾ ಜ್ಯೋತಿ?' ಅಂತ ಗುರುಗುಟ್ಟಿದರು. 'ನಾವು ಆರಾಮಿದೀವಿ. ನೀವು ಹೋಗಬಹುದು' ಅಂದು ಇವಳೂ ರಪ್ಪನೆ ಬಾಗಿಲು ಹಾಕಿಕೊಂಡಳು. ಗಂಡನನ್ನು ಒಂದು ಮಾತೂ ಆಡಿಸದೆ, ಅವನು ಅಕ್ಕರೆ ತೋರಿದರೂ ಮೂಗುಮುರಿದು ಹೋದ ಅಣ್ಣಂದಿರ ಕಂಡವಳಿಗೆ ನೋವಾಗಿತ್ತು. ಗಂಡ ಹೆಂಡರಿಬ್ಬರೂ ಉಂಡು ಮಲಗಿದಾಗ ಗಂಡನ ಮೇಲೆ ಮೆದುವಾಗಿ ಕೈ ಹಾಕಿದ ಅವಳು, 'ಈ ಧಾಂಡಿಗರು ಮನಸ್ಸಿಗೆ ನೋವು ಮಾಡಿದ್ದರೆ ನಾನು ಸಾರಿ ಕೇಳ್ತೀನಿ ಯಶ್' ಅಂದಳು ಹನಿಗಣ್ಣಾದಳು. 'ನೀನು ಪಕ್ಕದಲ್ಲಿರೋವಾಗ ಯಾವ ನೋವೂ ನಂತಾವ ಸುಳಿಯಲ್ಲಮ್ಮಿ' ಎಂದವಳನ್ನು ಬಾಚಿಕೊಂಡನವನು.

ಮರುದಿನ ಹಳ್ಳಿಗೆ ಬಂದ ಗಂಡುಮಕ್ಕಳು ಗೌಡರ ಸಮಕ್ಷಮ ವರದಿ ಒಪ್ಪಿಸಿ, ಅವರೆಲ್ಲಿ ವೀರಭದ್ರಾವತಾರ ತಾಳುವರೋ ಎಂದು ಸೂರು ನೋಡುವಾಗ ಗೌಡರು ಉಗ್ರಾವತಾರ ತಾಳಿದ ಕಾರಣಕ್ಕೆ ಮಕ್ಕಳ ಪಕ್ಕೆಯಲ್ಲಿ ಉಸಿರು ಸಿಕ್ಕಿಕೊಂಡಿತ್ತು. 'ನಾಲಾಯಕ್ ನನ್ಮಕ್ಳಾ. ಅಲ್ರಲಾ ಒಡ ಹುಟ್ಟಿದಾಕಿ ಸಿಕ್ಕಾಗ ಅವಳನ್ನು ಅಲ್ಲೇ ಬಿಟ್ಟು ಬಂದಿದ್ದಿರಲ್ಲೋ ಪಡಪೋಸಿಗಳಾ? ಮನೆಗೆ ಕರೆಯಲಿಲ್ಲೇನ್ರೋ?' ಎಂದು ತಾರಾಡಿದರು. ಗೌಡತಿಯೂ ಮಗಳನ್ನು ನೆನೆದು ಅಳುವಾಗ 'ಅಳಬ್ಯಾಡ ಸುಮ್ಕಿರಮ್ಮಿ. ನಾಳೆಕೆ ನಾನೇ ಹೋಗೀ ಕರ್ಕೊಂಡು ಬತ್ತೀನಿ' ಎಂದು ಮೆದುವಾದರು. 'ಒಬ್ಬಾಕಿನೇ ಬಂದಾಳೇನ್ರೀ?' ಎಂದು ಬಿಕ್ಕಿದಳು ಗೌಡತಿ. ಗೌಡರೆ 'ಗಂಡ ಹೆಂಡ್ರಿಬ್ರೂ ಇಬ್ಬರ್ನೂ ಕರೆತರೋಣೇಳು' ಎಂದು ಸೂರು ಹಾರುವಂತೆ ನಕ್ಕರು. 'ಕಳ್ಳುಬಳ್ಳಿ ಕಣೆ ಅದು' ಅಂದರು. 'ಅದು ಸರಿಕಣಪ್ಪ. ಆದ್ರೆ ಅವನು ಎಸ್ಸಿ ನನ್ನಾಗ. ಅವನ್ನ ಒಳಾಗೆ ಬಿಟ್ಟುಕಂಡ್ರೆ ನಮ್ಮ ಮರ್ಯಾದಿ ಹಳ್ಳಿಯಾಗೇನಾಗಬೇಕು ಹೇಳು?' ಗಂಡು ಹೈಕಳು ರಾಂಗ್ ಆದರು. 'ಹೆಚ್ಚು ಮಾತುಬ್ಯಾಡ. ನಾಳೆ ಬೆಂಗಳೂರಿಗೆ ಹೊಂಡ್ರಲಾ, ಕಾರು ರೆಡಿ ಮಾಡ್ಕಳಿ ಅಷ್ಟೆಯಾ' ಎಂದು ಹುಕುಂ ಮಾಡಿದರು ಗೌಡ.

***

ಮರುದಿನ ಸಂಜೆಗಾಗಲೇ ಗೌಡರು ಮಕ್ಕಳೊಂದಿಗೆ ಮಗಳ ಮನೆಯಲ್ಲಿದ್ದರು. ಬಾಯಿ ತುಂಬಾ ಮಾತನಾಡಿದರು. ಯಶವಂತನನ್ನು ಮುಟ್ಟಿ ಮಾತನಾಡಿಸಿದರು. ಊರಿಗೂ ಕರೆದರು. 'ಈಗ್ಯಾಕಪ್ಪಯ್ಯ ಯುಗಾದಿಗೋ ಮಾರನಾಮಿಗೋ ಬರ್ತೀವಿ ಬಿಡು' ಅಂದಳು ನೆಂಟನ್ನೇ ಮರೆತಿದ್ದ ಜ್ಯೋತಿ. 'ಹೆಂಗಾದೀತವ್ವ ಕೂಸೆ. ಬರ್ರಿ, ಆರತಕ್ಷತೆ ಇಟ್ಕಂಡೀವಿ. ಇಬ್ರಿಗೂ ಲಗ್ನವಂತೂ ಮಾಡೋ ಭಾಗ್ಯವು ಇರಲಿಲ್ಲ' ಕಣ್ಣೊರೆಸಿಕೊಂಡರು ಗೌಡ. ಇವಳು ಬಿಕ್ಕಂಡಿದ್ದರೂ 'ಆತೇಳು ಮಾವಾರೆ' ಅಂದುಬಿಟ್ಟ ಯಶ್. 'ಮಗಳು ಉಪ್ಪಿಟ್ಟು ಮಾಡ್ತೀನಿ' ಅಂದಳು. ಗೌಡರು ಮಗಳ ಮನೆಯ ನೀರೂ ಮುಟ್ಟಲಿಲ್ಲ. 'ದಿನಾ ಮನೆಯೊಳಗೆ ಉಣ್ಣೋದು ಐತೇಳು. ಬರ್ರಿ ಯಾವ್ದಾರ ದೊಡ್ಡ ಹೋಟಲಿಗೆ ಹೋಗುಮಾ' ಎಂದು ಹೊರಡಿಸಿಕೊಂಡು ಹೊರಟರು. ಭರ್ಜರಿ ತಿಂಡಿ ತಿನಿಸಿದರು. ತಿಂಡಿ ಮುಗಿಸುತ್ತಲೇ ಕಾರು ಹಳ್ಳಿಯತ್ತ ಓಡಿತು.

ರಾತ್ರಿ ಊಟದ ಟೇಮಿಗೆ ಸರಿಯಾಗಿ ಕಾರು ತಾನು ಹುಟ್ಟಿ ಬೆಳೆದ ಮನೆಯ ಮುಂದೆ ನಿಂತಾಗ ಜ್ಯೋತಿ ಕಣ್ಣಲ್ಲಿ ಹೊಂಬೆಳಕು. ಪಡಸಾಲೆಗೆ ಬಂದು ಕೂತಾಗ ಗೌಡತಿ ಬಂದು ಮಗಳನ್ನು ಮುದ್ದಾಡಿ ಲಟಿಕೆ ತೆಗೆದಳು. ಗೌಡರು ಊಟಕ್ಕೆ ಬಡಬಡಿಸೋವಾಗ ಗೌಡತಿಯೇ ನೆಪ್ಪು ಮಾಡಿದಳು. 'ಆರತಕ್ಷತೆ ಅಂದಿದ್ರೀ'. 'ಹಂಗೆ ಮಾಡಾಕೆ ಬರ್ತದೇನೇ ಹುಚ್ಚಿ. ಸತ್ಯನಾರಾಯಣಸ್ವಾಮಿ ಪೂಜೆ ಇಕ್ಕಬೇಕು. ಮಂದಿ ಕರೀಬೇಕು. ನಾಳೀಕೆ ಅದೇ ಕೆಲ್ಸ' ಎಂದು ಗೌಡರು ನಗಾಡುವಾಗ, ದಂಪತಿಗಳ ಮೋರೆಯಲ್ಲಿ ಬೆಳದಿಂಗಳು. ಮಗಳು ಅಡುಗೆ ಮನೆಯಲ್ಲಿ ತಾಯಿಯೊಂದಿಗೆ ಊಟಕ್ಕೆ ಕುಂತಳು. ಅಳಿಯನಿಗೆ ಹೊರಗೆ ಹಾಕಿರೋ ಡೈನಿಂಗ್ ಟೇಬಲ್ ಮೇಲೆ ಒಬ್ಬನಿಗೇ ತಾಟು ಹಾಕಿದರು. ಊಟದಾಗೇನು ವಿಶೇಷತೆ ಇರಲಿಲ್ಲ. ಅದೇ ರಾಗಿಬಾಲ್ ಬಸ್ಸಾರು. ನೆಂಚಿಕೆಗೆ ಸೊಪ್ಪು. ಯಶ್‌ಗೆ ಏನನ್ನಿಸಿತೋ ಜ್ಯೋತಿ ಮುಖ ಕಂದಿತು. ಊಟದ ನಂತರವಂತೂ ದಂಪತಿಗಳಿಗೆ ಎದುರುಗಡೆ ಖಾಲಿ ಇದ್ದ ಅಥವಾ ಖಾಲಿ ಮಾಡಿಸಿದ ಮನೆಯಲ್ಲಿ ಮಲಗಲು ಅರೇಂಜಾಗಿತ್ತು! ಅವಳಿಗೋ ಇರುಸುಮುರುಸು. ಮನೆಯ ಕೋಣೆಯಲ್ಲಿ ಸೊಗಸಾದ ಹಾಸಿಗೆ ಹಾಸಿ ಹೂಗಳಿಂದ ಸಿನಿಮಾದಾಗೆ ಅಲಂಕಾರ ಮಾಡಿದಂಗೆ ಮಾಡಿರೋದನ್ನು ಕಂಡು ದಂಪತಿಗಳ ಮನವರಳಿತ್ತು. ತಾವೇ ತಪ್ಪಾಗಿ ತಿಳಿದೆವೇನೋ ಅಂದುಕೊಂಡರು. 'ಬೇಗ ಏಳಬೇಕ್ರಪ್ಪಾ, ಪುರೋಹಿತರು ಬತ್ತವರೆ ಸ್ನಾನಗೀನ' ಎಂದು ಗೊಳ್ಳನೆ ನಕ್ಕರು ಗೌಡ. ಇವರೂ ನಗುತ್ತಾ ಬಾಗಿಲು ಹಾಕಿಕೊಂಡರು. ಸರಿ ರಾತ್ರಿಯಲ್ಲೆಂತದೋ ಚೀರಾಟ ಗೌಡತಿಗೆ ಎಚ್ಚರ. ಕಿಟಕಿಯತ್ತ ತಿರುಗಿದರೆ ಎದುರು ಮನೆ ಹತ್ತಿ ಉರಿಯುತ್ತಿದೆ. ಚೀರಾಡಿ ಗಂಡನನ್ನು ಎಬ್ಬಿಸಿದಳು. ಗೌಡ ಹೌಹಾರಿ ದುಡುದುಡು ಪಡಸಾಲೆಗೆ ಬಂದ. 'ಮ್ಯಾಕೇಳ್ರಲೇ ಬೇವಾರ್ಸಿಗಳಾ' ಎಂದು ಕೂಗಾಡಿ ಮಕ್ಕಳನ್ನು ಎಬ್ಬಿಸಿಕೊಂಡು ಹೊರ ಬಂದಾಗಲೇ ಮಂದಿ ಸೇರಿತ್ತು. ಏನಾತು ಗೌಡರೇ? ಮಂದಿ ಕೇಳಿದರು. 'ಕಾಣಲ್ಲೇನ್ರೇಲೆ ಬೆಂಕಿ ಬಿದ್ದೇತೆ' ಎಂದು ಗಕ್ಕನೆ ರೇಗಿದರು. 'ನೀರು ತಂದು ಆರಿಸ್ರಲೇ ದುಶ್ಮನ್ಗಳಾ' ಎಂದು ಗಂಡುಮಕ್ಕಳ ಮೇಲೆ ಹರಿಹಾಯ್ದರು.

ಒಳಗೆ 'ಅಯ್ಯಯ್ಯೋ... ಕಾಪಾಡಿ... ಹೆಲ್ಪ್' ಎಂಬ ಚೀರಾಟ. ಗೌಡತಿ ಮನೆಯತ್ತ ಓಡುವುದನ್ನು ಗೌಡರೇ ತಡೆದರು. 'ಬಿಡ್ರಿ ನನ್ನಾ... ಹೊರಗಡೆಯಿಂದ ಬಾಗಿಲಿಗೆ ಯಾವನೋ ಬೋಲ್ಟ್ ಹಾಕ್ಸವ್ನೆ. ತೆಗೆದ್ರಾನಾ ಹೊರ್ಗಬಂದಾವು' ಅಂತ ಬೋರಿಟ್ಟಳು. ಜನರ ಗದ್ದಲದಲ್ಲಿ ಅದೂ ಯಾರಿಗೂ ಕೇಳದಂತಾಯಿತು. ಹಳ್ಳಿಗರು ಮನೆಯಿಂದ ಕೊಡಪಾನದಾಗೆ ನೀರು ತಂದು ಎರಚಿ, ಮಣ್ಣು ಉಗ್ಗಿ ಆರಿಸುವ ಪ್ರಯತ್ನದಲ್ಲಿರುವಾಗಲೇ ಒಳಗಿನ ಚೀರಾಟ ಸ್ತಬ್ಧವಾಗಿತ್ತು. 'ಇದೇನು ಗೌಡರೇ ಹಿಂಗಾಗೋತು?' ಹಳ್ಳಿ ಪಂಚಾಯ್ತಿ ಮೆಂಬರ್ ಚಡಪಡಿಸುವಾಗ, 'ಹಣೇಬರಾವು ಹಂಗೈತೆ ಕಣ್ಲಾ, ಸುಖಪಡೋದು ಅವುಗಳ ಹಣೆಯಾಗೆ ಬ್ರಮ್ಮ ಬರೆದ್ನೇ ಮರ್ತವ್ನೆ. ತಾನೊಂದು ಬಗೆದರೆ ದೈವ ಒಂದು ಬಗೀತು ಅಂತ ದೊಡ್ಡೋರು ತಮಾಷೆಗೇಳವರೆ ಅನ್ಕಂಡ್ಯಾ?' ಎಂದು ಲೊಚಗುಟ್ಟುತ್ತಾ ನಿಂತರು ಗೌಡ. ಕೂಗಾಡುತ್ತಾ ಶಾಪ ಹಾಕುವ ಗೌಡತಿಯತ್ತ ತಿರುಗಿ, 'ಇವಳ್ನ ಒಳಾಗೆ ಕೂಡಿ ಹಾಕ್ರಲೆ, ಬೆಂಕಿಯಾಗೆ ಬಿದ್ದು ನಿಗತ್ಕಂಡಾಳು' ಎಂದು ಮಕ್ಕಳ ಮೇಲೆ ಉಗ್ರರಾದರು. ಬೆಂಕಿ ಆಗಾಗ ಬುಗ್ಗನೆ ಎದ್ದು ಕಿಡಿ ಮೇಲೇರುತ್ತಲೇ ಇರುವಾಗ ಬೆಂಕಿ ನಂದಿಸುವ ಪ್ರಯತ್ನವೂ ಬೆಳತನಕ ಸಾಗಿತ್ತು.

ಪ್ರತಿಕ್ರಿಯಿಸಿ: feedback@sudha.co.in